**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ, ಬೆಂಗಳೂರು.

**ಸಂಖ್ಯೆ:** ಪಪೂಶಿಇ/ಆವಿ(ಬಿ)/ಜಿಉ.ನಿ.ಕ/ಬಾ.ವಾ.ಟೆ/01/2015-16 ದಿನಾಂಕ: 12-01-2016.

**ಜ್ಞಾಪನ**

**ವಿಷಯ:-** ಜಿಲ್ಲಾ ಉಪನಿರ್ದೇಶಕರ ಕಛೇರಿ ಉಪಯೋಗಕ್ಕಾಗಿ ಬಾಡಿಗೆ ವಾಹನವನ್ನು ಪಡೆಯುವ ಬಗ್ಗೆ.

**ಉಲ್ಲೇಖ:-** 1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ರಿವಾನ್ವೀ 2012, ಬೆಂಗಳೂರು ದಿನಾಂಕ: 23-08-2012.

2. ಈ ಕಛೇರಿ ಪತ್ರ ಸಂಖ್ಯೆ: ಪಪೂಶಿಇ/ಆವಿ(ಬಿ)/ಜಿಉ.ನಿ.ಕ/ಬಾ.ವಾ.ಟೆ/01/2015-16 ದಿನಾಂಕ:18-08-2015.

3. ಜಿಲ್ಲಾ ಉಪ ನಿರ್ದೇಶಕರುಗಳ ಮನವಿಗಳು.

***

2015-16ನೇ ಸಾಲಿನಲ್ಲಿ ಉಲ್ಲೇಖ-(2)ರನ್ವಯ ಜಿಲ್ಲಾ ಉಪ ನಿರ್ದೇಶಕರುಗಳ ಕಛೇರಿ ಕೆಲಸಗಳಿಗೆ, 4 ಸೀಟುಗಳ ಒಂದು ಬಾಡಿಗೆ ವಾಹನವನ್ನು (4 Wheeler LMV Non A/C) (ಸರ್ಕಾರಿ ವಾಹನಗಳನ್ನು ಬಳಸಿಕೊಳ್ಳುತ್ತಿರುವ ಜಿಲ್ಲಾ ಉಪ ನಿರ್ದೇಶಕರುಗಳ ಕಛೇರಿಗಳನ್ನು ಹೊರತು ಪಡಿಸಿ) ಜಿಲ್ಲಾಧಿಕಾರಿಗಳ ಜಿಲ್ಲಾ ಬುಲೆಟಿನ್ ಮೂಲಕ ವಾಹನ ಪಡೆಯುವ ಬಗ್ಗೆ(ಇ-ಪ್ರೊಕ್ಯೂರ್‌ಮೆಂಟ್ ಟೆಂಡರನಲ್ಲಿ ವಿಧಿಸಿರುವ ಷರತ್ತುಗಳನ್ವಯ) ಟೆಂಡರ್ ಪ್ರಕಟಿಸಿ, ಹೆಚ್ಚು ಜನಪ್ರಿಯವಿರುವ ದೈನಂದಿನ ಪ್ರಸಾರಗೊಳ್ಳುವ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡುವ ಮೂಲಕ ಕರ್ನಾಟಕ ಪಾರದರ್ಶಕ ನಿಯಮಗಳನ್ನು ಪಾಲಿಸಿ ಉಪ ನಿರ್ದೇಶಕರ ಹಂತದಲ್ಲಿ ಟೆಂಡರ್ ಪ್ರಕ್ರೀಯೆಯನ್ನು ದಿನಾಂಕ: 31-08-2015 ರೊಳಗೆ ಪೂರೈಸಿ, ಉಪ ನಿರ್ದೇಶಕರ ಹಂತದಲ್ಲಿ ಟೆಂಡರ್ ಅಂಗೀಕರಿಸಿ ದಿನಾಂಕ:01-09-2015 ರಿಂದ ಜಾರಿಗೆ ಬರುವಂತೆ ವಾಹನಗಳನ್ನು ಬಳಸಿಕೊಳ್ಳಲು ಸಂಬಂಧಪಟ್ಟ ದಾಖಲೆಗಳೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ಪಡೆಯುವಂತೆ ತಿಳಿಸಲಾಗಿತ್ತು.

ಉಲ್ಲೇಖ-(3)ರಲ್ಲಿ ಜಿಲ್ಲಾ ಉಪ ನಿರ್ದೇಶಕರುಗಳು ಯಾರೂ ಟೆಂಡರ್ ಅರ್ಜಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿ ಬಾಡಿಗೆವಾಹನವನ್ನು ಹಿಂದಿನ ದರದಲ್ಲಿ ಪಡೆಯಲು ಮಾರ್ಗದರ್ಶನ ಕೋರಿರುವುದನ್ನು ಪರಿಗಣಿಸಿ, ಸೆಪ್ಟೆಂಬರ್-2015 ತಿಂಗಳಿನಿಂದ ಮಾರ್ಚ್-2016 ತಿಂಗಳ ಅಂತ್ಯದವರೆಗೆ (01-09-2015 ರಿಂದ 31-03-2016 ರವರೆಗೆ) ಹಳೆಯ ದರದಲ್ಲಿಯೇ ಬಾಡಿಗೆ ವಾಹನಗಳನ್ನು ಮುಂದುವರಿಸಲು ಅನುಮತಿ ನೀಡಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆ.
2. ಜಂಟಿ ನಿರ್ದೇಶಕರು(ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3. ಉಪ ನಿರ್ದೇಶಕರು(ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಅಂತರ್ಜಾಲದಲ್ಲಿ ಪ್ರಕಟಿಸಲು.
5. ಲೆಕ್ಕಾಧಿಕಾರಿಗಳು, ಲೆಕ್ಕಪತ್ರ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ
6. ಕಛೇರಿ ಪ್ರತಿ.